## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸ್ಕ್ಯಾನ್ ಮಾಡಿದ ದಾಖಲೆಗಳನ್ನು ರೈತರಿಗೆ ಒದಗಿಸಲು ಶುಲ್ಕ ವಿಧಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂ.ಕಂಇ 144 ಭೂದಾಸ 2001 ದಿನಾಂಕ:03.02.2004 ಮತ್ತು ದಿನಾಂಕ:27.08.2005.

2. ಸರ್ಕಾರಿ ಆದೇಶ ಸಂಖ್ಯೆ:ಕಂಇ 62 ಎಂಎಂಆರ್ 2000 ದಿನಾಂಕ:19.04.2001.

******

<u>ಪ್ರಸ್ತಾವನೆ:</u>

ಸದ್ಯದಲ್ಲಿ ಭೂದಾಖಲೆಗಳನ್ನು ಪ್ರತಿಯೊಂದಕ್ಕೆ ರೂ.6.25 ರಂತೆ ಹಂಚುವ ಯೋಜನೆ ಇದ್ದರೂ ಸಿಬ್ಬಂದಿ ಕೊರತೆ, ನಕಾಶೆಗಳ ತಯಾರಿಕೆ ಹಾಗೂ ಅವುಗಳ ನಿಖರತೆ ಇತ್ಯಾದಿ ಅಂಶಗಳಿಂದ ಅನೇಕ ಪ್ರಕರಣಗಳಲ್ಲಿ ಪ್ರತಿಗಳನ್ನು ಕೊಡಲು ಬಹಳ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ರಾಜ್ಯದಲ್ಲಿನ 16 ತಾಲ್ಲೂಕುಗಳ ಭೂದಾಖಲೆಗಳನ್ನು ಸ್ಕ್ಯಾನ್ ಮಾಡಿ ಸಂರಕ್ಷಿಸುವ ಕಾರ್ಯವನ್ನು ಪ್ರಾಯೋಗಿಕವಾಗಿ ಕೈಗೊಂಡಿದ್ದು, ಈಗಾಗಲೇ 13 ತಾಲ್ಲೂಕುಗಳ ಸ್ಕ್ಯಾನಿಂಗ್ ಕಾರ್ಯವು ಪೂರ್ಣಗೊಂಡಿರುತ್ತದೆ. ಸ್ಕ್ಯಾನಿಂಗ್ ಮೂಲಕ ಗಣಕ ಯಂತ್ರದಲ್ಲಿ ಸಂಗ್ರಹಿಸಿರುವ ಭೂದಾಖಲೆಗಳ ಪ್ರತಿಗಳನ್ನು ಸಾರ್ವಜನಿಕರಿಗೆ ಕೋರಿಕೆಯ ಮೇರೆಗೆ "ಭೂಮಿ ಕಿಯಾಸ್ಕ್" ಮೂಲಕ ವಿತರಿಸುವ ಯೋಜನೆಯನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳುವ ಉದ್ದೇಶವು ಸರ್ಕಾರಕ್ಕಿರುತ್ತದೆ. ಈಗಾಗಲೇ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನಲ್ಲಿ ಈ ಯೋಜನೆಯನ್ನು ಪ್ರಾಯೋಗಿಕವಾಗಿ ಕೈಗೊಳ್ಳಲಾಗಿದೆ. ಸದರಿ ಯೋಜನೆಯ ಫಲಿತಾಂಶದ ಆಧಾರದ ಮೇಲೆ ಉಳಿದ ತಾಲ್ಲೂಕುಗಳಲ್ಲಿ ಇಂತಹ ದಾಖಲೆಗಳನ್ನು ವಿತರಿಸುವ ಯೋಜನೆಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಹಮ್ಮಿಕೊಳ್ಳಲಾಗಿದೆ.

ಪ್ರಸ್ತುತ "ಭೂಮಿ" ಯಡಿ ಪ್ರತಿಯೊಂದಕ್ಕೆ ರೂ.15 ರಂತೆ ಶುಲ್ಕವನ್ನು ವಿಧಿಸಿ ದಾಖಲೆಗಳನ್ನು ತಾಲ್ಲೂಕು ಕಚೇರಿಗಳಲ್ಲಿ ಹಂಚುತ್ತಿರುವ ಹಿನ್ನಲೆಯಲ್ಲಿ ಸರ್ವೆ ದಾಖಲೆಗಳನ್ನು ಸಹಾ ಅದೇ ರೀತಿ ಕೊಡುವ ಯೋಜನೆಯನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಹಾಗೂ ರಾಜ್ಯದ ಪ್ರತಿ ತಾಲ್ಲೂಕಿನ ರೈತರಿಗೆ ಅಗತ್ಯವೆನಿಸಿದಾಗ ಸ್ಕ್ಯಾನ್ ಮಾಡಿ ಸಂಗ್ರಹಿಸಿಡಲಾದ 1)ರೀ ಸರ್ವೆ ಟಿಪ್ಪಣಿ 2)ಹಿಸ್ಸಾ ಸರ್ವೆ ಟಿಪ್ಪಣಿ, 3)ಹಿಸ್ಸಾ ಸರ್ವೆ ಪಕ್ಕಾ ಪುಸ್ತಕ/ಅಟ್ಲಾಸ್ 4)ಆರ್.ಆರ್.ಪುಸ್ತಕದ ಪ್ರತಿ ಮತ್ತು ಖರಾಬು ಉತಾರ್ ಇತ್ಯಾದಿ ದಾಖಲೆಗಳ ಪ್ರತಿಗಳನ್ನು "ಭೂಮಿ ಕಿಯಾಸ್ಕ್" ಮೂಲಕ

**** - 2

SO_SSLR

ಪಡೆಯಲು ಅನುಕೂಲ ಕಲ್ಪಿಸಿಕೊಡುವ ಉದ್ದೇಶದಿಂದ ಪ್ರಾಯೋಗಿಕವಾಗಿ ಪ್ರತಿಯೊಂದಕ್ಕೆ ರೂ.15-00ಕ್ಕೆ ನಿಗದಿಪಡಿಸಲು ಸರ್ಕಾರವು ತೀರ್ಮಾನಿಸಿದೆ. ಈ ರೀತಿ ಸಂಗ್ರಹಿಸಲಾದ ಶುಲ್ಕವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ವೈಯಕ್ತಿಕ ಠೇವಣಿ ಖಾತೆಗೆ (P.D.Account) ಜಮಾ. ಮಾಡಿಕೊಳ್ಳುವುದೆಂದು ಅದರಲ್ಲಿ ರೂ.1.50 ನ್ನು ಭೂಮಿ ಕೇಂದ್ರದ ಖಾತೆಗೆ ಜಮಾ ಮಾಡುವುದು. ಉಳಿದ ಸ್ಟೇಷನರಿ ವೆಚ್ಚಕ್ಕಾಗಿ ಭೂಮಿ ಕೇಂದ್ರದ ಖಾತೆಗೆ ಜಮಾ ಮಾಡುವುದು. ಉಳಿದ ಸ್ಟೇಷನರಿ ವೆಚ್ಚಕ್ಕಾಗಿ "ಭೂಮಿ ಯೂಜರ್ ಚಾರ್ಜಸ್" ಮಾದರಿಯಲ್ಲಿ ನಿರ್ವಹಿಸುವ ಬಗ್ಗೆ ಮೊತ್ತವನ್ನು "ಭೂಮಿ ಯೂಜರ್ ಚಾರ್ಜಸ್" ಮಾದರಿಯಲ್ಲಿ ನಿರ್ವಹಿಸುವ ಬಗ್ಗೆ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಕಂಇ 73 ಭೂದಾಸ 2005,</u>

<u>ಬೆಂಗಳೂರು ದಿನಾಂಕ:22.07.2006.</u>

ಪ್ರಸ್ತಾವನೆಯಲ್ಲಿ ಹೇಳಲಾದ ಅಂಶಗಳ ಹಿನ್ನೆಲೆಯಲ್ಲಿ ಭೂಮಾಪನ ಇಲಾಖೆಗೆ ಸಂಬಂಧಿಸಿದ, ಸ್ಕ್ಯಾನ್ ಮಾಡಿ ಗಣಕಯಂತ್ರದಲ್ಲಿ ಸಂಗ್ರಹಿಸಿಡಲಾದ A4 ಅಳತೆಯ ಯಾವುದೇ ಭೂದಾಖಲೆಯನ್ನು ರೈತರಿಗೆ "ಭೂಮಿ ಕಿಯಾಸ್ಕ್" ಮೂಲಕ ನೀಡಲು ಪ್ರತಿಯೊಂದು ಭೂದಾಖಲೆಯ ಪ್ರತಿಗಾಗಿ ರೂ.15.00ಗಳ ಶುಲ್ಕವನ್ನು ವಿಧಿಸತಕ್ಕದ್ದು.

ಈ ರೀತಿ ಸಾರ್ವಜನಿಕರಿಂದ ಪಡೆಯಲಾದ ರೂ.15.00 ಗಳ ಶುಲ್ಕವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ವೈಯಕ್ತಿಕ ಠೇವಣಿ ಖಾತೆಗೆ (P.D.Account) ಜಮಾ ಮಾಡಿಕೊಳ್ಳುವುದು. ಅದರಲ್ಲಿ ರೂ.1.50 ನ್ನು ಭೂಮಿ ಕೇಂದ್ರದ ಖಾತೆಗೆ ಸ್ಟೇಷನರಿ ನಿರ್ವಹಣಾ ವೆಚ್ಚವೆಂದು ತೆಗೆದುಕೊಂಡು ಉಳಿದ ರೂ.13.50ಗಳನ್ನು "ಭೂಮಿ ಯೂಜರ್ ಚಾರ್ಜಸ್" ಮಾದರಿಯಲ್ಲಿ ನಿರ್ವಹಿಸತಕ್ಕದ್ದು.

ಈ ಪ್ರಾಯೋಗಿಕ (Pilot) ಮಾದರಿಯನ್ನು 3 ತಿಂಗಳ ನಂತರ ಪುನ: ಪರಿಶೀಲನೆ ಮಾಡಿ, ಇತರ ತಾಲ್ಲೂಕುಗಳಿಗೆ/ದಾಖಲೆಗಳಿಗೆ ಅನ್ವಯಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
ಎಸ್. ಕೆ. ಪುರುಷೋತ್ತಮ
(ಎಸ್.ಕೆ. ಪುರುಷೋತ್ತಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಮಾಪನ).

<u>ಗೆ:</u>

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಭೂಮಾಪನ ಇಲಾಖೆ, ಬೆಂಗಳೂರು.
3. ಎಲ್ಲಾ ವಿಭಾಗಗಳ ಪ್ರಾದೇಶಿಕ ಆಯುಕ್ತರು,
4. ಸರ್ಕಾರದ ವಿಶೇಷ ಕಾರ್ಯದರ್ಶಿಗಳು, ಕಂದಾಯ ಇಲಾಖೆ(ಭೂಮಿ).
5. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು.
6. ಎಲ್ಲಾ ಜಿಲ್ಲಾಧಿಕಾರಿಗಳು.
7. ಉಪ ನಿರ್ದೇಶಕರು, ಖಜಾನೆ ಗಣಕ ಜಾಲ ಕೇಂದ್ರ(NMC) ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
8. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
9. ಎಲ್ಲಾ ಉಪ ವಿಭಾಗಾಧಿಕಾರಿಗಳು/ತಹಸೀಲ್ದಾರರು.
10. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು.
11. ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಆಪ್ತ ಸಹಾಯಕರು.
12. ಶಾ.ರ.ಕ./ಹೆಚ್ಚುವರಿ ಪ್ರತಿಗಳು.